ಜಿಲ್ಲಾ ಪಂಚಾಯತ್, ತುಮಕೂರು

ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಡಾ//.ಎಸ್.ರಾಧಾಕೃಷ್ಣನ್ ರಸ್ತೆ, ಸೋಮೇಶ್ವರಪುರಂ,ತುಮಕೂರು-02.

ದೂರವಾಣಿ ಸಂಖ್ಯೆ : 0816-2278444 E-mail ID : ddpiedutumkur@gmail.com

ಸಂಖ್ಯೆ:ಅನು2:ಮಾ.ನ.ಬ.83/2021-22 ದಿನಾಂಕ:19-08-2021.

ಕರ್ನಾಟಕ ಶಿಕ್ಷಣ ಮಸೂದೆ 1983

ನಮೂನೆ-5

ನಿಯಮ-9

**ವಿಷಯ:-** ಚೈತನ್ಯ ಟೆಕ್ನೋ ಶಾಲೆ ಹೊರಪೇಟೆ ಕೋತಿತೋಪು ತುಮಕೂರು ತುಮಕೂರು ತಾಲ್ಲೂಕು ಈ ಶಾಲೆಗೆ 2020-21ನೇ ಸಾಲಿಗೆ ಶಾಶ್ವತ ಅನುದಾನ ರಹಿತವಾಗಿ ಮಾನ್ಯತೆ ನೀಡುವ ಬಗ್ಗೆ.

**ಉಲ್ಲೇಖ:** 1) ಕರ್ನಾಟಕ ಶಿಕ್ಷಣ ಮಸೂದೆ 1983 ರ ಸೆಕ್ಷನ್ 38.

2) ಆಯುಕ್ತರು, ಸಾ.ಶಿ.ಇ. ಬೆಂಗಳೂರು ರವರ ಸುತ್ತೋಲೆ ಸಂಖ್ಯೆ ಸಿ8(8) ಶಾ.ಶಿ.ಅ. ಅಧಿಕ ವಿಭಾಗ 01-02 ದಿನಾಂಕ:17-08-02.

3) ಸರ್ಕಾರಿ ಆದೇಶ.ಸಂಖ್ಯೆ.ಇಡಿ.113.ವಿವಿಧ/2005 ದಿನಾಂಕ 02-11-2006.

4) ಸರ್ಕಾರಿ ಆದೇಶ ಸಂಖ್ಯೆ ಇಡಿ-445-ಪಿಎಂಸಿ-2005 ದಿನಾಂಕ;23-12-05.

5) ಸರ್ಕಾರದ ಸುತ್ತೋಲೆ ಸಂಖ್ಯೆ:ಇಪಿ.ಎಸ್.ಹೆಚ್.ಹೆಚ್.2020 ದಿ.10-11-2020. ಮತ್ತು 10-03-2021

6) ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರ ಜ್ಞಾಪನಾ ಪತ್ರ ಸಂಖ್ಯೆ:ಸಿ8(3)ಶಾ.ಶಿ.ಇ.ಹೊ.ಪ್ರೊ.ಅ/54/2020-21, ದಿನಾಂಕ:22.12.2020

7) ಮಾನ್ಯ ನಿರ್ದೇಶಕರು (ಪ್ರಾ.ಶಿ.) ಸಾ.ಶಿ.ಇಲಾಖೆ, ಬೆಂಗಳೂರುರವರ ಪತ್ರ ದಿನಾಂಕ 01-02-2021

8) ಆಡಳಿತ ಮಂಡಳಿ ಪ್ರಸ್ತಾವನೆ ಮೇರೆಗೆ

9) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ಇವರ ಪತ್ರ ಸಂಖ್ಯೆ: ಅ6/ಮಾ.ನ.40/2021-22 ದಿನಾಂಕ:05-08-2021.

***

ನೆಕ್ಸ್‌ಜೆನ್ ಎಜುಕೇಷನ್ ಟ್ರಸ್ಟ್ (ರಿ). ರಂಗಾರೆಡ್ಡಿ ಜಿಲ್ಲೆ ಅಂಧ್ರಪ್ರದೇಶ ವತಿಯಿಂದ ಚೈತನ್ಯ ಟೆಕ್ನೋ ಶಾಲೆ ಹೊರಪೇಟೆ ಕೋತಿತೋಪು ತುಮಕೂರು ಶಾಲೆಗೆ ಮಾನ್ಯತೆ ನೀಡಲು ಉಲ್ಲೇಖ(8) ಮತ್ತು (9)ರಲ್ಲಿನ ಕೋರಿಕೆಯಂತೆ ಪರಿಶೀಲಿಸಿದೆ. ಸರ್ಕಾರದ ಆದೇಶ ಸಂಖ್ಯೆ ಇಡಿ77. ಯೋಯೋಕ 2020, ದಿನಾಂಕ:28/04/2012 ರಲ್ಲಿನ ಆರ್.ಟಿ.ಇ ನಿಯಮ 11 ರಂತೆ ಸದರಿ ಶಾಲೆಯು ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ತುಮಕೂರು ರವರು ಮೌಲ್ಯಾಂಕನ ಮಾಡಿ 100 ಕ್ಕೆ 72 ಅಂಕಗಳನ್ನು ನೀಡಿರುತ್ತಾರೆ ಶಾಲೆಗೆ ಭೇಟಿ ಮಾಡಿ ಸ್ಥಳಪರಿಶೀಲನಾ ವರದಿಯನ್ನು ನೀಡಿ ಮಾನ್ಯತೆ ನೀಡಬಹುದೆಂಬ ಅಭಿಪ್ರಾಯದೊಂದಿಗೆ ಶಿಫಾರಸು ಮಾಡಿರುತ್ತಾರೆ. ಸದರಿ ಶಾಲೆಗೆ 01 ರಿಂದ 08ನೇ ತರಗತಿಗೆ ಉಲ್ಲೇಖ (7) ರನ್ವಯ ಪ್ರಾಥಮಿಕ ಶಾಲೆಗಳಿಗೆ ಮಾನ್ಯತೆಯನ್ನು ಉಪನಿರ್ದೇಶಕರ ಹಂತದಲ್ಲಿ ನೀಡಲು ನಿರ್ದೇಶಿಸಿರುವಂತೆ ಉಲ್ಲೇಖ(5) ಮತ್ತು (6)ರ ಆದೇಶದಂತೆ ಹಾಗೂ ಈ ಎಲ್ಲಾ ಮೇಲಿನ ಅಂಶಗಳ ಮೇರೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು 2020-21ನೇ ಸಾಲಿಗೆ ಮಾತ್ರ ಶಾಶ್ವತ ಅನುದಾನ ರಹಿತವಾಗಿ ಮಾನ್ಯತೆ ನೀಡಿದೆ.

2...

| | | |
|---|---|---|
| 1 | ಶಾಲಾ ಆಡಳಿತ ಮಂಡಳಿ/ವಿದ್ಯಾಸಂಸ್ಥೆಯ ವಿಳಾಸ | ನೆಕ್ಸ್‌ಜೆನ್ ಎಜುಕೇಷನ್ ಟ್ರಸ್ಟ್ (ರಿ). ರಂಗಾರೆಡ್ಡಿ ಜಿಲ್ಲೆ ಅಂಧ್ರಪ್ರದೇಶ |
| 2 | ಶಾಲೆಯ ಹೆಸರು ಮತ್ತು ವಿಳಾಸ | ಚೈತನ್ಯ ಟೆಕ್ನೋ ಶಾಲೆ ಹೊರಪೇಟೆ ಕೋತಿತೋಪು ತುಮಕೂರು ತುಮಕೂರು ತಾಲ್ಲೂಕು |
| 3 | ಶಾಲೆ ಪ್ರಾರಂಭವಾದ ವರ್ಷ/ದಿನಾಂಕ | 2020-21 |
| 4 | ಶಿಕ್ಷಣ ಮಸೂದೆ 1983 ರಂತೆ ಶಾಲೆ ನೋಂದಣಿ ಸಂಖ್ಯೆ | 30559/2020-21 |
| 5 | ಪ್ರಸ್ತುತ ಮಾನ್ಯತೆ ನೀಡಿರುವ ವಿವರ | ತರಗತಿ: 01 ಮತ್ತು 08 ನೇ ತರಗತಿ ವರೆಗೆ; ವಿಭಾಗಗಳು: ತಲಾ 01 (ಒಂದು ವಿಭಾಗದಂತೆ); ಮಾಧ್ಯಮ: ಆಂಗ್ಲ |
| 6 | ಮಾನ್ಯತೆ ನೀಡಿದ ಅವಧಿ | 01 ಮತ್ತು 08ನೇ ತರಗತಿಗೆ 2020-21ನೇ ಸಾಲಿಗೆ ಶಾಶ್ವತ ಅನುದಾನ ರಹಿತವಾಗಿ ಪ್ರಥಮ ಮಾನ್ಯತೆ ನೀಡಿದೆ. |

**ಷರತ್ತುಗಳು :**

1) ವಿದ್ಯಾರ್ಥಿಗಳ ದಾಖಲಾತಿ:ಹಾಜರಾತಿಯನ್ನು ಮಾನ್ಯತೆ ಪಡೆದಿರುವ ತರಗತಿ ಮತ್ತು ವಿಭಾಗಗಳಿಗೆ ಅನುಗುಣವಾಗಿ ಶಿಕ್ಷಣ ಕಾಯ್ದೆ ರೀತ್ಯಾ ಕನಿಷ್ಠ ಕಡಿಮೆ ಹಾಜರಾತಿ ಇಲ್ಲದಂತೆ ಕಾಯ್ದುಕೊಳ್ಳುವುದು.
2) ಶಾಲೆಗೆ ಅಗತ್ಯವಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯದ ಪುಸ್ತಕ ಭಂಡಾರ ಇತರೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
3) ಕುಡಿಯುವ ನೀರು ಮತ್ತು ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯವನ್ನು ಒದಗಿಸುವುದು.
4) ಸರ್ಕಾರದಿಂದ ನಿಗದಿಪಡಿಸಿರುವ ದರದಲ್ಲಿಯೇ ಶುಲ್ಕವನ್ನು ವಿದ್ಯಾರ್ಥಿಗಳಿಂದ ವಸೂಲಿ ಮಾಡತಕ್ಕದ್ದು. ಹಾಗೂ 2ಬಿ ಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು
5) ಇಲಾಖೆಯಿಂದ ನಿಗದಿಪಡಿಸಿರುವ ಪಠ್ಯಕ್ರಮದಂತೆ ಬೋಧನೆ ಮಾಡತಕ್ಕದ್ದು ಹಾಗೂ ಅನುಮತಿ ನೀಡಿರುವ ಮಾಧ್ಯಮದಲ್ಲಿಯೇ ಬೋಧನೆ ಮಾಡುವುದು.
6) ಆಯಾ ವರ್ಷದಲ್ಲಿಯೇ ಸಂಸ್ಥೆಯ ಕಾರ್ಯಕಾರಿಸಮಿತಿ ಸದಸ್ಯರ ಪಟ್ಟಿಯನ್ನು ಜಿಲ್ಲಾ ನೋಂದಣಾಧಿಕಾರಿಗಳಿಂದ ನವೀಕರಿಸುವುದು. ಹಾಗೂ ಆಯಾ ವರ್ಷದಲ್ಲಿಯೇ ಆಡಿಟ್ ಮಾಡಿಸಿ ವರದಿಯನ್ನು ಸಂಬಂಧಪಟ್ಟವರಿಗೆ ಸಲ್ಲಿಸುವುದು.
7) ಇಲಾಖೆಯ ಪೂರ್ವಾನುಮತಿ ಇಲ್ಲದೆ ಹೆಚ್ಚುವರಿ ವಿಭಾಗಗಳನ್ನು ತೆರೆಯಬಾರದು.
8) ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮಕ್ಕೆ ವಿರುದ್ಧವಾಗಿರುವ ಅಂಶಗಳು ಕಂಡುಬಂದಲ್ಲಿ ಮಾನ್ಯತೆ ಹಿಂದಕ್ಕೆ ಪಡೆಯಲಾಗುತ್ತದೆ.
9) ಶಾಲಾ ಕಟ್ಟಡ ಮತ್ತು ಆಟದ ಮೈದಾನವನ್ನು ಸಂಸ್ಥೆಯ ಕಾರ್ಯದರ್ಶಿಯವರ ಹುದ್ದೆಯ ಹೆಸರಿಗೆ 3 ತಿಂಗಳೊಳಗಾಗಿ ನೊಂದಣಿ ಮಾಡಿಸಿ ಸಲ್ಲಿಸುವುದು.
10) ತರಬೇತಿ ಪಡೆದಿರುವ ಶಿಕ್ಷಕರನ್ನು ನೇಮಿಸುವ ಷರತ್ತಿಗೊಳಪಟ್ಟಿದೆ. ಸಿಬ್ಬಂದಿಯವರುಗಳ ಸೇವಾವಹಿಯನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು. ಹಾಗೂ ಬ್ಯಾಂಕ್ ಮೂಲಕ ಕನಿಷ್ಟ ವೇತನ ಪಾವತಿಸುವುದು, ಸೇವಾಭದ್ರತೆಯನ್ನು ನಿಯಮಾನುಸಾರ ನೀಡಲು ತಿಳಿಸಿದೆ.
11) ಶಾಲಾ ಮಕ್ಕಳ ಸುರಕ್ಷತೆಯ ಬಗ್ಗೆ ಹೆಚ್ಚಿನ ಆದ್ಯತೆ ನೀಡುವುದು ಹಾಗೂ ಶಾಲಾ ಆವರಣದಲ್ಲಿ ಅಪಾಯಕಾರಿಯಾದ ವಿದ್ಯುತ್, ಬೆಂಕಿ, ಆಳವಾದ ಬಾವಿಗಳು ಇದ್ದರೆ ಇವುಗಳ ಬಗ್ಗೆ ಗಮನ ಹರಿಸಿ ಅಪಾಯವುಂಟಾಗದಂತೆ ಎಚ್ಚರಿಕೆ ವಹಿಸುವುದು. ಸಿ.ಸಿ.ಕ್ಯಾಮೆರಾ ಅಳವಡಿಸುವುದು ಹಾಗೂ ಅಗ್ನಿನಂದಕವನ್ನು ಕಡ್ಡಾಯವಾಗಿ ಅಳವಡಿಸಲು ತಿಳಿಸಿದೆ.
12) ಶಾಲಾ ಕಾಂಪೌಂಡು ನಿರ್ಮಿಸಿ ಕೈತೋಟವನ್ನು ನಿರ್ವಹಣೆ ಮಾಡುವುದು.
13) ಸರ್ಕಾರದ ಅಧಿಸೂಚನೆ ದಿನಾಂಕ:08-03-2018 ರಂತೆ ಮೂಲಭೂತ ಸೌಲಭ್ಯಗಳಾದ ಭೂ ವಿಸ್ತೀರ್ಣ, ಶಾಲಾ ಕಟ್ಟಡ, ಹಾಗೂ ಇತರೆ ಎಲ್ಲಾ ಮೂಲಭೂತ ಸೌಲಭ್ಯಗಳು ಮತ್ತು ಷರತ್ತುಗಳನ್ನು ನಿಗದಿತ ಸಮಯದೊಳಗೆ ಪೂರೈಸತಕ್ಕದ್ದು.

14) ಸರ್ಕಾರದ ಅಧಿಸೂಚನೆ ದಿನಾಂಕ:08-03-2018 ರಲ್ಲಿ ತಿಳಿಸಿರುವಂತೆ ಮಕ್ಕಳ ಸುರಕ್ಷತಾ ಕ್ರಮಗಳನ್ನು (Physical Safety that includes infrastructure,Helth and Transportation, Personal and sexual Safety, Social and Emotional Safety, Cyber Safety, and Emergency Preparedness and Disaster Management.) ನಿಗದಿತ ಕಾಲಮಿತಿಯೊಳಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನುಷ್ಠಾನಗೊಳಿಸತಕ್ಕದ್ದು.

15) ಕನ್ನಡ ಭಾಷಾ ಕಲಿಕಾ ಅಧಿನಿಯಮ-2015ರ ಪ್ರಕಾರ ಕನ್ನಡವನ್ನು ಪ್ರಥಮ/ ದ್ವಿತೀಯ ಭಾಷೆಯಾಗಿ ಕಡ್ಡಾಯವಾಗಿ ಕಲಿಸತಕ್ಕದ್ದು.

16) ಆನ್-ಲೈನ್ ನಲ್ಲಿ ತಂತ್ರಾಂಶ ಅಳವಡಿಸಿದ ಕೂಡಲೇ ಮಾನ್ಯತೆ ವಿವರಗಳನ್ನು ತಪ್ಪದೇ ಅಳವಡಿಸುವುದು.

17) ಉಲ್ಲೇಖ 1 ರಿಂದ 7 ರ ವರೆಗಿನ ಆದೇಶ ಮತ್ತು ಷರತ್ತುಗಳನ್ನು ತಪ್ಪದೆ ಪಾಲಿಸುವುದು.

18) ಈ ವಿಚಾರದಲ್ಲಿ ಒದಗಿಸಿರುವ ದಾಖಲೆಗಳು ಹಾಗೂ ಮಾಹಿತಿಗಳು ಸುಳ್ಳು ಎಂದು ಕಂಡು ಬಂದಲ್ಲಿ ಈ ಆದೇಶ ತಂತಾನೆ ವಜಾ ಆಗುತ್ತದೆ.

(ಸಿ.ನಾಚೇಗೌಡ)
ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ತುಮಕೂರು ಜಿಲ್ಲೆ.

ಪ್ರತಿಯನ್ನು :

1) ಕ್ಷೇತ್ರ ಶಿಕ್ಷಣಾಧಿಕಾರಿಗಳು, ತುಮಕೂರು ತಾಲ್ಲೂಕು ರವರಿಗೆ ನೀಡುತ್ತಾ ಈ ಮೇಲಿನ ಷರತ್ತುಗಳನ್ನು ಪೂರೈಸಿರುವುದನ್ನು ಖಚಿತಪಡಿಸಿಕೊಳ್ಳುವುದು.
2) ಕಾರ್ಯದರ್ಶಿಗಳು ನೆಕ್ಸ್‌ಜೆನ್ ಎಜುಕೇಷನ್ ಟ್ರಸ್ಟ್ (ರಿ). ರಂಗಾರೆಡ್ಡಿ ಜಿಲ್ಲೆ ಆಂಧ್ರಪ್ರದೇಶ
3) ಮುಖ್ಯ ಶಿಕ್ಷಕರು, ಚೈತನ್ಯ ಟೆಕ್ನೋ ಶಾಲೆ ಹೊರಪೇಟೆ ಕೋತಿತೋಪು ತುಮಕೂರು ತುಮಕೂರು ತಾಲ್ಲೂಕು ರವರಿಗೆ
4) ಕಡತದ ಪ್ರತಿ.
5) ಕಛೇರಿ ಪ್ರತಿ.